**3ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ**

**SC.74/2019**

ದಿಃ 06.03.2026.
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)
**Cw-21 Pw-14**

ಹೆಸರು ಃ ಶ್ರೀನಿವಾಸ್ ಹೆಚ್ ಆರ್
ತಂದೆಯ ಹೆಸರು ಃ ರಾಮಣ್ಣ
ವಯಸ್ಸು ಃ 27 ವರ್ಷ
ಉದ್ಯೋಗ ಃ ಚಾಲಕ
ವಾಸಸ್ಥಳ ಃ ಹುಲಿಕಲ್ ಗ್ರಾಮ, ಮಾಗಡಿ ತಾಲ್ಲೂಕು.

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. ದಿಃ 25.03.2019 ರಂದು ಮದ್ಯಾಹ್ನ ಸುಮಾರು 3.15 ರಿಂದ 4.15 ರ ಸಮಯದಲ್ಲಿ ಚಿಕ್ಕಮಗಳೂರಿನ ತುಗರಿ ಅಂಕಲ್ ಸರ್ಕಲ್ ನಲ್ಲಿ ನನಗೆ ಈಗ ತೋರಿಸಿದಂತಹ ದಾಖಲಾತಿಗೆ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿ ಸ್ಥಳ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುವ ಕಾರಣ ಸ್ಥಳ ಪಂಚನಾಮೆಯನ್ನು ನಿಪಿ 30 ಹಾಗೂ ನಿಪಿ.30 (ಎ) ಎಂದು ಗುರುತಿಸಲಾಯಿತು. ನಾನು ಸಹಿ ಮಾಡುವ ಸಮಯದಲ್ಲಿ ರಮೇಶ ಮತ್ತು ಪೋಲೀಸರು ಮತ್ತು ಶ್ರೀಕಾಂತ್ ಇದ್ದರು. ಪೋಲೀಸರಿಗೆ ಶ್ರೀಕಾಂತ್ ಕೊಲೆಯಾದಂತಹ ವ್ಯಕ್ತಿಯನ್ನು ವಾಹನದಲ್ಲಿ ಹತ್ತಿಸಿಕೊಂಡು ಹೋದಂತಹ ಸ್ಥಳ ಎಂದು ಸದರಿ ಸ್ಥಳವನ್ನು ತೋರಿಸಿರುತ್ತಾರೆ. ಅಲ್ಲಿ ಪೋಲೀಸರು ಒಂದು ಪೋಟೋ ತೆಗೆದು ನನ್ನ ಸಹಿ ಪಡೆದಿರುತ್ತಾರೆ. ಸಾಕ್ಷಿ 2 ಪೋಟೋಗಳಲ್ಲಿ ತನ್ನನ್ನು ನೋಡಿ ಗುರುತಿಸಿದ್ದು ಸದರಿ ಪೋಟೋಗಳನ್ನು ಕ್ರಮವಾಗಿ ನಿಪಿ 31 ಮತ್ತು 32 ಎಂದು ಗುರುತಿಸಲಾಯಿತು. ಸದರಿ ಶ್ರೀಕಾಂತ್ ನನ್ನು ನೋಡಿದರೆ ಗುರುತಿಸಬಲ್ಲೆ. ಆತ ಇಂದು ನ್ಯಾಯಾಲಯದ ಮುಂದೆ ಇದ್ದಾನೆ.

<u>ಪಾಟೀ ಸವಾಲುಃ ಶ್ರೀ. ವಕೀಲರಿಂದ</u>

ನಾನು ಮಾಗಡಿಯ ಕುದೂರು ಹೋಬಳಿಯ ಹುಲಿಕಲ್ ನಲ್ಲಿ ವಾಸ ಮಾಡುತ್ತೇನೆ ಎಂದರೆ ಸರಿ. ನಾನು ಚಿಕ್ಕಮಗಳೂರಿನ ತುಗರಿ ಅಂಕಲ್ ಸರ್ಕಲ್ ಗೆ ಹೋಗುವಷ್ಟರಲ್ಲಿ ಪೊಲೀಸರು ಮತ್ತು ಶ್ರೀಕಾಂತ್ ಎಲ್ಲಾ ಅಲ್ಲಿ ಇದ್ದರು ಎಂದರೆ ಸರಿ. ಅಲ್ಲಿ ಪೋಲೀಸ್ ಇನ್ಸ್ ಪೆಕ್ಟರ್ ಆರೋಪಿ ಒಬ್ಬ ವ್ಯಕ್ತಿಯನ್ನು ಇಲ್ಲಿಂದ ಕರೆದುಕೊಂಡು ಹೋಗಿರುತ್ತಾನೆ ಎಂದು ನಮಗೆ ತಿಳಿಸಿದರು ಎಂದರೆ ಸರಿ. ಮಹಜರನ್ನು ನಾನಾಗಿ ಓದಿ ನೋಡಿರುವುದಿಲ್ಲ, ಸಾಕ್ಷಿ ಸ್ವಯಂ ಹೇಳುತ್ತಾರೆ ಪೋಲೀಸರು ನನಗೆ ಓದಿ ಹೇಳಿದರು. ಪೋಟೋ ತೆಗೆದ ಜಾಗದ ಹಿಂದೆ ಬ್ಯಾಂಕ್ ಬಿಲ್ಡಿಂಗ್ ಇದೆ ಎಂದರೆ ಸರಿ. ಸದರಿ ಬ್ಯಾಂಕ್ ಬಿಲ್ಡಿಂಗ್ ಗೆ ಸಿಸಿ ಟಿ ವಿ ಕ್ಯಾಮೆರಾ ಅಳವಡಿಸಲಾಗಿದೆ ಎಂದರೆ ಸರಿ.

(ಈ ಹಂತದಲ್ಲಿ ಈಗ ಬೆಂಚ್ ಕರ್ತವ್ಯಕ್ಕೆ ನಿಯೋಜಿಸಿರುವಂತಹ ಸಿಬ್ಬಂದಿಯು ನ್ಯಾಯಾಲಯದ ಗಮನಕ್ಕೆ ಈ ಹಿಂದೆ ನಿಶಾನೆಯನ್ನು ಗುರುತಿಸುವಲ್ಲಿ ಆದಂತಹ ತಪ್ಪನ್ನು ನ್ಯಾಯಾಲಯದ ಗಮನಕ್ಕೆ ತಂದಿದ್ದು, ನಿಪಿ 6 ರಿಂದ 8 2 ಬಾರಿ ಗುರುತಿಸಲಾಗಿದ್ದು,ಉಳಿದ ನಿಶಾನೆಗಳ ಕ್ರಮಾಂಕದಲ್ಲಿ ಈಗ ವ್ಯತ್ಯಾಸ ಬಂದಿದ್ದು, ಅದನ್ನು ಸರಿಪಡಿಸಿಕೊಂಡು ಇಂದು ಗುರುತಿಸಿಕೊಂಡಿರುವಂತಹ ದಾಖಲಾತಿಗಳ ಕ್ರಮಾಂಕವನ್ನು ತಿದ್ದಿಕೊಳ್ಳುವ ಅವಕಾಶವನ್ನು ಖಾದಿರಿಸಿ ಸಾಕ್ಷಿಯ ಸಾಕ್ಷ್ಯದ ಪ್ರಿಂಟನ್ನು ತೆಗೆಯಲು ಆದೇಶಿಸಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಪಂಚಾಕ್ಷರಿ.ಎಂ.)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
C/c 3ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ರಾಮನಗರ.